

## ಪರಿಸರ ಸ್ನೇಹಿ ಹೂಕುಂಡ

ಹರಿಹರಪುರ ಸಮೀಪದ ಗೌರಿಗದ್ದೆಯ ಅವಧೂತರ ಆಶ್ರಮದಲ್ಲಿ ಕಂಡುಬಂದ ಪರಿಸರ ಸ್ನೇಹಿ ಹೂಕುಂಡವಿದು. ಕತ್ತರಿಸಿದ ಮರದ ಬೊಡ್ಡೆಗಳಿಗೆ ಮಣ್ಣು, ಗೊಬ್ಬರ ತುಂಬಿಸಿ ಅಲಂಕಾರಿಕ ಹೂ ಗಿಡಗಳನ್ನು ಬೆಳೆಸಿ ಆಶ್ರಮದ ಅಂದ ಹೆಚ್ಚಿಸಲು ಇಡಲಾಗಿದೆ. ಆಶ್ರಮದೆಲ್ಲೆಡೆ ಇಂತಹ ಹಲವಾರು ಪರಿಸರ ಸ್ನೇಹಿ ಹೂಕುಂಡಗಳನ್ನು ಇಡಲಾಗಿದೆ. ವಿವಿಧ ವಿನ್ಯಾಸದಿಂದ ಕೂಡಿದ ಈ ಹೂಕುಂಡಗಳು ಮನಸಿಗೆ ಮುದ ನೀಡುತ್ತವೆ.

■ **ಕೆ.ಆರ್.ಸುಮಾ, ಶಿವಮೊಗ್ಗ**



## ಅಡಕಲಿ ಮನೆಯ ತಿಜೋರಿ!

ಇಂದು ಬ್ಯಾಂಕ್ ಲಾಕರ್‌ಗಳಲ್ಲಿ, ಕಬ್ಬಿಣದ ತಿಜೋರಿಯಲ್ಲಿ ಅಮೂಲ್ಯ ವಸ್ತುಗಳನ್ನಿಟ್ಟರೂ ಸುರಕ್ಷಿತವಾಗಿರುತ್ತವೆ ಎಂಬ ಗ್ಯಾರಂಟಿ ಇಲ್ಲ. ಆದರೆ, ನಮ್ಮ ಪೂರ್ವಜರು ಆಧುನಿಕತೆಯನ್ನು ನಾಚಿಸುವಂತಹ ಕೆಲವೊಂದು ಚಮತ್ಕಾರಗಳನ್ನು ಮಾಡಿದ್ದಾರೆ. ಅಂತಹ ಚಮತ್ಕಾರಗಳ ಸಾಲಿಗೆ ಅಡಕಲಿಯೂ ಸೇರುತ್ತದೆ. ಮನೆಯಲ್ಲಿರುವ ಅಡಕಲಿಗಳ ಮೇಲೆ ಸಿರಿವಂತಿಕೆ ಅಳೆಯುವ ಕಾಲವಿತ್ತು. ಈ ಅಡಕಲಿಗಳ ಉಪಯೋಗ ಮಾತ್ರ ಅನನ್ಯ. ಜವಾರಿ ಬೀಜಗಳು, ಬಂಗಾರದ ಆಭರಣಗಳು, ಪ್ರಮುಖ ಹೈನು ಪದಾರ್ಥಗಳು, ಹಣ ಇತ್ಯಾದಿಗಳನ್ನು ಜತನದಿಂದ ಕಾಪಿಟ್ಟುಕೊಳ್ಳಲು ಬಳಸುತ್ತಿದ್ದರು. ಕಳ್ಳ ಕಾಕರಿಂದ, ತುಡುಗು ಕೈಗಳಿಂದ ವಸ್ತುಗಳನ್ನು ಮಣ್ಣಿನ ಮಡಿಕೆಗಳಿಂದಲೇ ಸಂರಕ್ಷಿಸುವ ಮನೆಯ ತಿಜೋರಿಯಾಗಿದ್ದವು. ಅಲ್ಲದೆ ಇದರ ಮೇಲ್ಮೈ ನುಣುಪಿನಲ್ಲಿ ಮುತ್ತೈದರು ಕುಂಕುಮ ಬೊಟ್ಟು ಇಟ್ಟುಕೊಳ್ಳುತ್ತಿದ್ದರಂತೆ. ನೋಡಿದಿರಾ, ಮನೆಯ ಟಿಜೋರಿಯ ಕರಾಮತ್ತನ್ನು.

■ **ಸ್ವರೂಪಾನಂದ ಎಂ., ಕೊಟ್ಟೂರು**

## ಕೊಬ್ಬರಿ ವಾಜ್

ಪರಿಚಯಸ್ಥರ ಮದುವೆಗೆ ಹೋಗಿದ್ದಾಗ ಮದುವೆ ಮನೆಯಲ್ಲಿ ಜೋಡಿಸಿಟ್ಟ ವಸ್ತುಗಳಲ್ಲಿ ಕೊಬ್ಬರಿ ವಾಜ್ ಕಣ್ಣಿಗೆ ಬಿತ್ತು. ಕೊಬ್ಬರಿಯನ್ನು ಸ್ವಲ್ಪವೂ ವೇಸ್ಟ್ ಮಾಡದೆ ಜಾಗ್ರತೆ ವಹಿಸಿ ಬಹಳ ಸುಂದರವಾಗಿ ಕೆತ್ತಿ ವಾಜ್ ತಯಾರಿಸಲಾಗಿತ್ತು. ಅದರ ಒಳಗೆ ಪ್ಲಾಸ್ಟಿಕ್ ಹೂವುಗಳನ್ನು ಇಟ್ಟಿದ್ದರಿಂದ ಅಂದ ಹೆಚ್ಚಿತ್ತು. ಕಲಾವಿದನ ಕೈಚಳಕ ನೋಡಿ ಬಹಳ ಖುಷಿಯಾಯಿತು.

■ **ಬಿ.ಎಸ್. ರಾಜಲಕ್ಷ್ಮಿ, ಹಾಸನ**

